ಸಪ್ಲೈ ಮಾಡುವುದಕ್ಕೆ, ಅಂದರೆ ಗ್ರಾಮಾಂತರದಲ್ಲಿ ನೀರಿಲ್ಲದೇ ಹೋದರೆ ಬೇರೆ ಕಡೆ ಕೊರೆದರೆ ಎಸ್ಟಿಮೇಟ್ ಕಾಸ್ಟ್ ಕೊಡಬೇಕು ಎಂದು ನಿಯಮ ಇದೆ. ಒಂದೊಂದಕ್ಕೆ ರೂ.೫–೨೦ ಸಾವಿರ ಎಸ್ಟಿಮೇಟ್ ಕಾಸ್ಟ್ ಬರುತ್ತದೆ. ಇದರಿಂದ ಆರ್ಥಿಕವಾಗಿ ಶಕ್ತಿ ಇಲ್ಲದೇ ಇರುವ ಮಂಡಲ ಪಂಚಾಯಿತಿಗಳು ಹಣವನ್ನು ಸಕಾಲಕ್ಕೆ ಕೊಡದೇ ಇರುವುದರಿಂದ ವಾಟರ್ ಟ್ಯಾಂಕ್ ಕೆಲಸ ಮುಗಿದರೂ ಜನರಿಗೆ ನೀರು ಸಿಗದೆ ತೊಂದರೆಯಾಗಿದೆ. ಆದುದರಿಂದ ಗ್ರಾಮಾಂತರಗಳಿಗೆ ಯಾವರೀತಿ ರಿಯಾಯಿತಿ ಕೊಡಂತ್ತೀರೋ ಅದೇರೀತಿ ಬೇರೆ ಕಡೆ ಕೊರೆದರೂ ರಿಯಾಯಿತಿ ಕೊಡಬೇಕು ಎಂದು ಕೇಳುತ್ತೇನೆ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಇದಕ್ಕೆ ಮಂಡಳಿಯು ನಿಯಮ ಇದೆ. ಲೇಟಿಸ್ಟ್ ಗ್ರಾಮಾಂತರದಲ್ಲಿ ಬಂದರೆ ಮಾತ್ರ ಅವರ ಕಾಸ್ಟನ್ನು ಭರಿಸಬೇಕು. ಸಾಮಾನ್ಯವಾಗಿ ಬೇರೆ ಬಹಳ ದೂರದ ರೆವಿನ್ಯೂ ಲ್ಯಾಂಡ್‌ನಲ್ಲಿ ಹೋದರೆ ಕಾಸ್ಟನ್ನು ಅವರು ಭರಿಸಬೇಕು ಎಂಬ ನಿಯಮ ಇದೆ. ಇದರ ಬಗ್ಗೆ ಬಹಳ ದೂರುಗಳು ಬರುತ್ತಿವೆ. ಮಂಡಲಪಂಚಾಯಿತಿ ಈ ಕಾಸ್ಟನ್ನು ಬೇರೆ ಮಾಡುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಬೇರೆ ವ್ಯವಸ್ಥೆ ಮಾಡಬೇಕಾಗುತ್ತದೆ. ಸಮ್ಮ ಈಗಿನ ಯೋಜನೆ ಏನೆಂದರೆ, ಈ ಪ್ರಾಜೆಕ್ಟ್‌ನಲ್ಲಿ ಕಿರಿನೀರು ಸರಬರಾಜು ಯೋಜನೆ ಅಥವಾ ಎನ್‌ಆರ್‌ಡಬ್ಲ್ಯೂಎಸ್ ಎ.ಆರ್.ಡಬ್ಲ್ಯೂ.ಎಸ್. ಯೋಜನೆಮಾಡುವಾಗಲೇ ಈ ಕಾಸ್ಟನ್ನು ಅದರಲ್ಲಿ ಸೇರಿಸಿ ಮಂಜೂರು ಮಾಡತಕ್ಕ ವ್ಯವಸ್ಥೆ ಮಾಡಬೇಕು ಎಂದು ಈಗಾಗಲೇ ಜಿಲ್ಲಾಪರಿಷತ್ತುಗಳನ್ನು ಕೇಳಿಕೊಂಡಿದ್ದೇವೆ. ಅಂತಹ ಸಂದರ್ಭಗಳಲ್ಲಿ ಗ್ರಾಮಾಂತರ ಪಂಚಾಯಿತಿಗಳವರು ಕೊಡಬೇಕಾಗಿ ಬರುವುದಿಲ್ಲ. ಇದನ್ನು ಸ್ಪೆಷಲ್ಲಾಗಿ ಎಕ್ಸಂಪ್ಟ್ ಮಾಡಬೇಕಾಗುತ್ತದೆ. ಒಂದು ನಿಯಮ ಮಾಡಿದಮೇಲೆ ಖಾಸಗಿಯವರಿಗೆ ಬೇರೆ ಮಾಡುವುದಕ್ಕೆ ಕಷ್ಟವಾಗಬಹುದು. ಇದನ್ನು ವಿಮರ್ಶೆ ಮಾಡಿ ಮಂಡಲ ಪಂಚಾಯಿತಿ ಮೇಲೆ ಭಾರ ಬೀಳದಂತೆ ಮಾಡಬೇಕು. ಇದನ್ನು ಯೋಚನೆ ಮಾಡಲಾಗುತ್ತದೆ.

ಗ್ರಾಮಾಂತರ ವಿದ್ಯುತ್ ಸರಬರಾಜಿನ ಹಣ ಪಾವತಿ ಮಾಡುವವರಿಗೆ ಯಾವುದೇ ಅಭಿವೃದ್ಧಿ ಕೆಲಸ ಮಾಡಲು ಸಾಧ್ಯವಿಲ್ಲದಿರುವ ಬಗ್ಗೆ

ನಿರ್ಣಿ. ಶ್ರೀ ಬಿ. ಎಸ್. ಮುದಿಯಪ್ಪರವರು (ಶಿಕಾರಿಪುರ)—ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಕಾರಿಪುರ ತಾಲ್ಲೂಕಿನಲ್ಲಿ ಗ್ರಾಮಾಂತರ ವಿದ್ಯುತ್ ಸರಬರಾಜಿಗೆ ಮಂಡಲಗಳಿಂದ ಬಾಕಿ ಹಣ ಕಟ್ಟಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ.

ಆ) ವಿದ್ಯುತ್ ಸೌಲಭ್ಯವಿಲ್ಲದ ಕೆಲವು ಹರಿಜನವಾಡಿ ಹಾಗೂ ಇತರ ಜನರು ವಾಸ ಮಾಡುವ ರಸ್ತೆಗಳಿಗೆ ವಿದ್ಯುತ್ ಕಂಬಗಳನ್ನು ಹೊಸದಾಗಿ ಹಾಕಿದ್ದರೂ ಕೂಡ ವಿದ್ಯುತ್ ಸೌಲಭ್ಯ ಒದಗಿಸದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಗಾಂಧಿನಗರ ಗ್ರಾಮಕ್ಕೆ ವಿದ್ಯುತ್ ಸೌಲಭ್ಯ ಒದಗಿಸದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಇದಕ್ಕೆ ಕಾರಣವೇನು ಹಾಗೂ ಕೈಗೊಂಡ ಕ್ರಮವೇನು?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಸಚಿವರು).—

ಅ) ಬಂದಿದೆ.

ಆ) ಬಂದಿದೆ.

ಇ) ಬಂದಿದೆ.

ಈ) ಗಾಂಧಿನಗರ ಗ್ರಾಮದ ವಿದ್ಯುದ್ದೀಕರಣದ ಅಂದಾಜಿಗೆ ಡಿಪಾರ್ಟ್‌ಮೆಂಟಲ್ ವಿಫ್ರಿಲ್ ತಿಂಗಳಿನಲ್ಲಿ ಮಂಜೂರಾತಿ ದೊರಕಿದೆ. ಈ ಕಾರ್ಯವನ್ನು ಜೂನ್ ತಿಂಗಳಲ್ಲಿ ಕೈಗೆತ್ತಿಕೊಂಡು ಜುಲೈ ತಿಂಗಳಲ್ಲಿ ಪೂರ್ಣಗೊಳಿಸಲಾಗುತ್ತದೆ.

ಶ್ರೀ ಜಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ. ಇದು ಕೇವಲ ಶಿಕಾರಿಪುರ ತಾಲ್ಲೂಕಿಗೆ ಅಲ್ಲ, ಇಡೀ ರಾಜ್ಯದಲ್ಲಿ ಗ್ರಾಮಾಂತರ ಪ್ರದೆಶದಲ್ಲಿ ವಿದ್ಯುತ್ ಸರಬರಾಜಿಗಾಗಿ ಆಯಾ ಮಂಡಲಗಳಿಂದ ಸಾಮಾನ್ಯವಾಗಿ ದುಡ್ಡು ಕಟ್ಟಿಲ್ಲ ಹರಿಜನರ ಕಾಲೋನಿಯಲ್ಲಿ ನಿರಡು ಕಂಬ ಸಾಕಬೇಕು, ವಿದ್ಯುತ್ ವ್ಯವಸ್ಥೆ ಮಾಡಿಕೊಡಬೇಕು ಎಂದು ಕೇಳಿದರೆ ಅಧಿಕಾರಿಗಳು ದುಡ್ಡು ಕಟ್ಟಿಲ್ಲದೇ ಇರುವುದರಿಂದ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಲಿಖಿತವಾಗಿ ತಾಲ್ಲೂಕು ಪಂಚಾಯಿತಿಗಳು ಉತ್ತರ ಕೊಡುತ್ತಿದ್ದಾರೆ. ಸರ್ಕಾರದಿಂದ ಏನಾದರೂ ಎಲ್ಲಿಲ್ಲಿ ಮಂಡಲ ಪಂಚಾಯಿತಿಗಳು ಹಣ ಪಾವತಿ ಮಾಡಿಲ್ಲ ಅಂತಹ ಕಡೆ ಯಾವುದೇ ಕೆಲಸ ಕಾರ್ಯಗಳನ್ನು ಮಾಡಬಾರದು ಎಂದು ಆದೇಶ ಹೋಗಿದೆಯೇ. ಏಕೆ ಆ ರೀತಿ ನಿಮ್ಮ ಅಧಿಕಾರಿಗಳು ಹೇಳುತ್ತಾ ಇದ್ದಾರೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಹಿ-ಹಿ-ಗಿರಿಲೆ ರಿಂದೀಚೆಗೆ ಕೊಡಬೇಕಾದಂಥ ಬಾಕಿಯನ್ನು ಗಣನೆಗೆ ತೆಗೆದುಕೊಳ್ಳದೆ ಅಲ್ಲಿಂದೀಚೆಗೆ ಕೊಡಬೇಕಾದಂಥ ಬಾಕಿಗಳನ್ನು ಕಟ್ಟಿದರೆ ಮಾತ್ರ ಅವರಿಗೆ ಸರಬರಾಜು ಮಾಡಬೇಕು. ಇದರಿಂದ ಹೊಂದರೆ ಜನರಲ್ಲಾಗಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕು ಎಂಬ ಸೂಚನೆ ಬೋಗಿದೆ. ಏಕೆಂದರೆ ಪ್ರವರ್ಭಗಳು ಮತ್ತು ಪಂಚಾಯಿತಿಗಳಿಂದ ಹಿಂದಿನ ಬಾಕಿ ಕುಂಬ ನಿಂತಿದೆ ಮಂಡಲ ಪಂಚಾಯಿತಿಗಳು ಬಾಗುವುದಕ್ಕೆ ಮುಂಚೆ ಇವು ಅಸ್ತಿತ್ವಕ್ಕೆ ಬರುವುದಕ್ಕೆ ಮುಂಚೆ ಇದ್ದಂಥ ಬಾಕಿಯನ್ನು ಒತ್ತಾಯ ಮಾಡುತ್ತಾ ಇಲ್ಲ. ಅಲ್ಲಿಂದೀಚೆಗೆ ಕೊಡಬೇಕಾದದು ಅವರ ಕರ್ತವ್ಯ ಎಂದು ಭಾವನೆ ಮಾಡಿ ಬಾಕಿ ನಿಲ್ಲುತ್ತಾ ಹೋಗುತ್ತಿದೆ. ಅದನ್ನು ಕೊಡದೇಹೋದರೆ ಮಂಡಳಿಗೆ ಕಷ್ಟವಾಗುತ್ತದೆ ಎನ್ನುವ ದೃಷ್ಟಿಯಿಂದ ಸಡಿಲಿಸಿ ಹೋಗಿದೆ.

ಶ್ರೀ ಜಿ. ಎಸ್. ಯಡಿಯೂರಪ್ಪ.—ಮಂಡಲ ಪಂಚಾಯಿತಿಯಲ್ಲಿ ಪ್ರಗತಿಪರ ಕೆಲಸಗಳಿಗೆ ದುಡ್ಡಿಲ್ಲದೇ ಇರುವಾಗ, ಪ್ರಧಾನರಿಗೆ ಸದಸ್ಯರಿಗೆ ಸಂಬಳಕ್ಕೆ ದುಡ್ಡಿಲ್ಲದೇ ಇರುವ ಸಂದರ್ಭದಲ್ಲಿ ಮಂಡಲಪಂಚಾಯಿತಿಗಳು ವಿದ್ಯುತ್ ಸರಬರಾಜಿಗಾಗಿ ದುಡ್ಡನ್ನು ಕಟ್ಟುತ್ತವೆ ಎಂದು ಯಾವರೀತಿ ನೀವು ಅಪೇಕ್ಷೆ ಪಡುತ್ತೀರಾ ಇನ್ನೊಂದು ರೂಪದಲ್ಲಿ ಕೊಡುವುದಕ್ಕೆ ಆಭ್ಯಂತರವಿಲ್ಲ. ಮಂಡಲ ಪಂಚಾಯಿತಿಗಳ ಹಣಕಾಸಿನ ಪರಿಸ್ಥಿತಿ ಸರಿಯಾಗಿಲ್ಲ. ಆದುದರಿಂದ ಮಂಡಲ ಪಂಚಾಯಿತಿಗಳ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಅವುಗಳ ಹಣಕಾಸಿನ ಪರಿಸ್ಥಿತಿ ಸುಧಾರಣೆಯಾಗುವವರೆಗೆ ಕಾರ್ಯಾಚರಣೆಯನ್ನು ಸಡಿಲ ಮಾಡಿ ಅಗತ್ಯವಿರುವಂಥ ಕೆಲಸಕಾರ್ಯಗಳಿಗೆ ಆದೇಶ ಕೊಡುತ್ತೀರಾ?

೨-೩೦ ಪಿ. ಎಂ.

ಎಡಚನೆಯದಾಗಿ ಗಾಂಧಿನಗರ ಏನ್ನುವ ಒಂದು ತಾಂಡಾವಿದ್ದು ಅಲ್ಲಿ ಲಂಬಾಣಿ. ಹರಿಜನರೇ ಹೆಚ್ಚು ವಾಸವಾಗಿದ್ದಾರೆ. ಕಳೆದ ೪-೫ ವರ್ಷಗಳಿಂದ ಅಲ್ಲಿನ ಜನರು ಕತ್ತಲಲ್ಲಿಯೇ ಇದ್ದಾರೆ. ಆದ್ದರಿಂದ ಇನ್ನೂ ೮-೧೦ ಕಂಬಗಳನ್ನು ಬಾಕಿ ತಕ್ಷಣ ವಿದ್ಯುತ್ ಒದಗಿಸಿಕೊಡುವುದಕ್ಕೆ ಆದೇಶ ಕೊಡುತ್ತೀರಾ

ಶ್ರೀ ಲಕ್ಷ್ಮೀನರಸಿಂಹಯ್ಯ.—ಜುಲೈ ತಿಂಗಳೊಳಗಾಗಿ ಖಂಡಿತವಾಗಿ ಮುಗಿಸಿ ಕೊಡುತ್ತೇನೆ. ಬೇರೆ ಬೇರೆ ಮಂಡಲಪಂಚಾಯಿತಿಗಳು ಸಾಲ ಕಟ್ಟುವಲ್ಲಿರುವಾಗ ಕೆಲವು ಮಂಡಲ ಪಂಚಾಯಿತಿಗಳು ಮಾತ್ರ ಬಾಕಿ ಉಳಿಸಿಕೊಂಡಿವೆ. ವಿದ್ಯುತ್ ಮಂಡಲಿಗೆ ಆರ್ಥಿಕವಾಗಿ ಹಣ ಬೇಕಾಗಿದೆ. ಆ ದೃಷ್ಟಿಯಿಂದ ಕನೆಸೆಷನ್ ಕೊಟ್ಟುಕೊಂಡು ಹೋಗುವ ನಮ್ಮ ಮಂಡಲಿಗೆ ಹಣ ಬರುವುದಿಲ್ಲ. ಹಣ ಕಟ್ಟುವುದಕ್ಕೆ ಮಂಡಲ ಪಂಚಾಯಿತಿಗಳು ಪ್ರಯತ್ನ ಮಾಡುತ್ತಾ ಹೋಗುವುದು. ಒಳ್ಳೆಯದು ಆದ್ದರಿಂದ ಇದನ್ನು ವಿಶೇಷವಾಗಿ ಪರಿಗಣಿಸುವುದಕ್ಕೆ ಕಷ್ಟವಾಗುತ್ತದೆ.

ಪ್ರಶ್ನೆ ಸಂಖ್ಯೆ ೫೦೩ (೧೯೦೭) ಸದಸ್ಯರು ಗೈರು ಹಾಜರಿ

ಶಹಾಪುರ ಮತ್ತು ಸುರಪುರ ತಾಲ್ಲೂಕಿನ ತಾಂಡಾಗಳಿಗೆ ವಿದ್ಯುತ್ ಒದಗಿಸುವ ಬಗ್ಗೆ

೧೮೪೯. ಶ್ರೀ ಶಿವಶೇಖರಪ್ಪಗೌಡ ಶರಮಾಳ (ಶಹಪುರ).—ಮಾನ್ಯ ವಿದ್ಯುತ್ ಹಾಗೂ ಹಾಗೂ ಕೋಟಿಗಾರಿಕೆ, ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?